# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 26-3-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಕಚ್ಚಾ ಗೋಡಂಬಿ ಆಮದು ಮಿತಿಗೊಳಿಸಲು ಗೋವಾ ಗೋಡಂಬಿ ಬೆಳೆಗಾರರ ಆಗ್ರಹ

ಕಳಪೆ ಗುಣಮಟ್ಟದ ಕಡಿಮೆ ದರದ ಕಚ್ಚಾ ಗೋಡಂಬಿ ಆಮದು ಹಾಗೂ ಇತರ ರಾಜ್ಯಗಳಿಂದ ಖರೀದಿಯಾಗುವ ಕಳಪೆ ಗುಣಮಟ್ಟದ ಕಚ್ಚಾ ಗೋಡಂಬಿ ಗೋವಾದ ಉತ್ತಮ ಗುಣಮಟ್ಟದ ಕಚ್ಚಾ ಗೋಡಂಬಿಯ ಹೆಸರನ್ನು ಕೆಡಿಸುತ್ತಿರುವುದರಿಂದ ಅವುಗಳ ಆಮದು ನಿಯಂತ್ರಣ ಗೊಳಿಸಲು ಗೋವಾದ ಗೋಡಂಬಿ ಬೆಳೆಗಾರರು ಆಗ್ರಹಿಸುತ್ತಿದ್ದಾರೆನ್ನಲಾಗಿದೆ. ಗೋವಾದ ಉತ್ತಮ ಗುಣಮಟ್ಟದ ಕಚ್ಚಾ ಗೋಡಂಬಿಗೆ ಉತ್ತಮ ದರ ಲಭಿಸುವಂತಾಗಬೇಕೆಂದು ಗೋವಾದ ಗೋಡಂಬಿ ಬೆಳೆಗಾರರು ಆಗ್ರಹಿಸುತ್ತಿದ್ದಾರೆ.

## ಜೋಳ ಹೊಸ ಬೆಳೆಯ ಆವಕ ಮುಂದಿನ ತಿಂಗಳು ದರ ಇಳಿಕೆ ಸಾಧ್ಯತೆ

ಎಪ್ರಿಲ್ ತಿಂಗಳಲ್ಲಿ ಜೋಳ ಹೊಸ ಬೆಳೆಯ ಆವಕ ದೇಶದ ಸ್ಥಳೀಯ ಮಾರುಕಟ್ಟೆಗೆ ಬರುವ ಸಂಭವವಿರುವುದರಿಂದ ಜೋಳ ದರಗಳು ಮುಂದಿನ ತಿಂಗಳು ಇಳಿಕೆಯಾಗುವ ಸಾಧ್ಯತೆಯಿದೆ. ರಫ್ತು ಹೆಚ್ಚಳ ಹಾಗೂ ದೇಶೀ ಬೇಡಿಕೆ ಹೆಚ್ಚಳವೆದ್ದಲ್ಲಿ ದರ ಸ್ಥಿರತೆಯನ್ನು ಕಾಯ್ದುಕೊಳ್ಳಲುಬಹುದು.

## ಸೋಯಾ ಅರೆಯುವಿಕೆ ಇಳಿಕೆ ಸಾಧ್ಯತೆ

ಈಗಿನ ಮಾರುಕಟ್ಟೆ ಸ್ಥಿತಿಯನ್ನು ಗಮನಿಸಿದರೆ 2021–22 ಅಕ್ಟೋಬರ್–ಸೆಪ್ಟೆಂಬರ್ ಅವಧಿಯನ್ನು ಸೋಯಾ ಅರೆಯುವಿಕೆಯ ಪ್ರಮಾಣ ಇಳಿಕೆಯಾಗಲಿದೆಯೆನ್ನಲಾಗಿದೆ. ಸೋಯಾಮೀಲ್ ಬೇಡಿಕೆ ಇಳಿಕೆ ಹಾಗೂ ಸೋಯಾಮೀಲ್ ಆಮದು ಇವುಗಳು ಅರೆಯುವಿಕೆ ಇಳಿಕೆಗೆ ಪೂರಕವಿದೆ. ದೇಶೀ ಸೋಯಾಮೀಲ್ ಉತ್ಪಾದನೆ 2020–21 ರಲ್ಲಿದ್ದ 104.55 ಲಕ್ಷ ಟನ್ ಗಳಿಂದ 2021–22 ರಲ್ಲಿ 118.89 ಲಕ್ಷ ಟನ್ ಗಳಿಗೆ ಹೆಚ್ಚಳವಾಗಿದೆ. ಆಮದು ಸೇರಿ ಈ ವರ್ಷ 124.22 ಲಕ್ಷ ಟನ್ ಸೋಯಾ ಬೀನ್ ಲಭ್ಯತೆಯಿದ್ದು, ಅರೆಯುವಿಕೆಗೆ 111.22 ಲಕ್ಷ ಟನ್ ಲಭ್ಯವಾಗಬಹುದೆನ್ನಲಾಗಿದ್ದು, ಇದು ಹಿಂದಿನ ವರ್ಷದ 100.19 ಲಕ್ಷ ಟನ್ ಗಳಿಂದ ಹೆಚ್ಚಳ ವಾಗಿದೆ.